# ‘ಶ್ರೀಗುರು’ : ಒಂದು ವಿಶ್ಲೇಷಣೆ

**ಡಾ. ಪಾರಿಜಾತ ಎಸ್.**

ಶ್ರೀರಾಮಕೃಷ್ಣರನ್ನು ಕುರಿತು ಕುವೆಂಪು ಅವರು ರಚಿಸಿದ ಪ್ರಸಿದ್ಧ ಕವಿತೆಯೇ ‘ಶ್ರೀಗುರು’. ಸಾಹಿತ್ಯದ ಚೌಕಟ್ಟಿನಿಂದಾಚೆಗೂ ಈ ಕವಿತೆಗೆ ದಾರ್ಶನಿಕ ಮೌಲ್ಯವಿದೆ; ಭಾರತೀಯ ಆಧ್ಯಾತ್ಮಿಕ ಪುನರುಜ್ಜೀವನದ ಹರಿಕಾರ ಎಂಬ ನೆಲೆಯಲ್ಲೂ ಆ ಮಹಾನ್ ವ್ಯಕ್ತಿತ್ವವನ್ನಿಲ್ಲಿ ಚಿತ್ರಿಸಲಾಗಿದೆ. ಈ ಕವಿತೆಯನ್ನು ಕುರಿತು ಚಿಂತಿಸಿರುವ ಲೇಖಕಿ ಬೆಂಗಳೂರು ಶೇಷಾದ್ರಿಪುರಂ ಸಂಜೆ ಕಾಲೇಜಿನಲ್ಲಿ ಉಪನ್ಯಾಸಕಿಯಾಗಿದ್ದಾರೆ. ಸಾಹಿತ್ಯ ಹಾಗ್ಯೂ ಆಧ್ಯಾತ್ಮಿಕ ವಿಚಾರಗಳಲ್ಲಿ ಆಸಕ್ತರಾಗಿರುವ ಅವರು ಸಂಶೋಧನ ಕಾರ್ಯದಲ್ಲೂ ತೊಡಗಿಕೊಂಡಿದ್ದಾರೆ.

**ಕು**ವೆಂಪು ಅವರು ಶ್ರೀರಾಮಕೃಷ್ಣ ವಚನೋದಿತರಾಗಿ ಧನ್ಯರಾದವರು. ‘ಶ್ರೀರಾಮಾಯಣದರ್ಶನಂ’ ಮಹಾಕಾವ್ಯದಲ್ಲಿ ಒಂದೆಡೆ “ಶ್ರೀರಾಮಕೃಷ್ಣ ಭಗವದ್‌ಗೋತ್ರಸಂಜಾತನಂ” ಎಂದು ತಮ್ಮನ್ನು ಕರೆದುಕೊಂಡಿದ್ದಾರೆ. ಅವರು ಪ್ರಕಟಿಸಿರುವ ಕವನ ಸಂಗ್ರಹದಲ್ಲಿ ‘ಅಗ್ನಿಹಂಸ’ ಎಂಬ ಕವನಗುಚ್ಛ ಅತ್ಯಂತ ಪ್ರಮುಖವಾದುದು. ಅಲ್ಲಿ ಭಾರತೀಯ ದರ್ಶನಗಳ ನೆಲೆಯಿದೆ; ತತ್ತ್ವಗಳ ಕುರಿತು ಮರುಚಿಂತನೆ ಇದೆ. ಆ ಸಂಕಲನ ಪ್ರಕಟವಾಗಿ ಇಂದಿಗೆ ಎಪ್ಪತ್ತೆರಡು ವರ್ಷಗಳು ಸಂದಿವೆ. ಭಾರತಕ್ಕೆ ಸ್ವಾತಂತ್ರ್ಯ ಬರುವ ಒಂದು ವರ್ಷ ಮೊದಲು ಅದು ಪ್ರಕಟವಾಯಿತೆಂಬುದು ಗಮನಾರ್ಹ. ಆಧುನಿಕ ಭಾರತದ ಸಂತಶ್ರೇಷ್ಠರಲ್ಲಿ ಶ್ರೀರಾಮಕೃಷ್ಣ ಪರಮಹಂಸರು ಮತ್ತು ಶ್ರೀ ರಮಣ ಮಹರ್ಷಿಗಳು ಪ್ರಮುಖರು. ಇವರಿಬ್ಬರೂ ಭಾರತದ ಆಧ್ಯಾತ್ಮಿಕ ಚೈತನ್ಯಕ್ಕೆ ಹೊಸರೂಪವನ್ನು ಕೊಟ್ಟವರು. ಭಾರತೀಯ ಸಂಸ್ಕೃತಿಯನ್ನು ವಿಶ್ವಕ್ಕೆ ಪರಿಚಯಿಸಿದ ದಾರ್ಶನಿಕ ವಿದ್ವಾಂಸ ಋಷಿ ಶ್ರೀ ಆನಂದ ಕುಮಾರಸ್ವಾಮಿ ಅವರು ಇಪ್ಪತ್ತರ ದಶಕದಲ್ಲಿ ಆಡಿದ ಮಾತೊಂದು ಬಲು ಗಮನಾರ್ಹವಾದುದು. ಅವರು ತಮ್ಮಲ್ಲಿಗೆ ಬಂದ ಆಧ್ಯಾತ್ಮಿಕ ಪಿಪಾಸುಗಳಿಗೆ ಹೇಳಿದ ಮಾತಿದು: “ಶ್ರೀರಾಮಕೃಷ್ಣ ಪರಮಹಂಸರು ಈಗಿಲ್ಲ. ಅವರು ನಿಜಕ್ಕೂ ಪೂರ್ಣ ಸಂತರು. ಈಗ ಅರುಣಾಚಲದಲ್ಲಿರುವ ಶ್ರೀ ರಮಣ ಮಹರ್ಷಿಗಳು ಪೂರ್ಣಸಂತರೆಂಬುದು ನನ್ನ ಅಭಿಪ್ರಾಯ” ಎಂದಿದ್ದಾರೆ. ಇಂಥ ಪೂರ್ಣಸಂತರಾದ ಭಗವಾನ್ ಶ್ರೀ ರಾಮಕೃಷ್ಣ ಪರಮಹಂಸರನ್ನು ‘ಶ್ರೀಗುರು’ ಎಂದು ಕರೆದು ತಮ್ಮ ಈ ಕವನದ ಮೂಲಕ ಧನ್ಯತೆಯನ್ನು ಅರ್ಪಿಸಿದ್ದಾರೆ. ಕುವೆಂಪು ಅವರ ಬೇರೆ ಬೇರೆ ಕವನ ಸಂಕಲನಗಳಲ್ಲಿ ಶ್ರೀರಾಮಕೃಷ್ಣರನ್ನು ಕುರಿತು ಮೂರ್‍ನಾಲ್ಕು ಕವನಗಳಿರುವುದು ನಿಜ. ಆದರೆ, ‘ಅಗ್ನಿಹಂಸ’ ಸಂಕಲನದಲ್ಲಿರುವ ಈ ಕವಿತೆ ಹಲವು ದೃಷ್ಟಿಗಳಿಂದ ನಮ್ಮ ಗಮನವನ್ನು ಸೆಳೆಯುತ್ತದೆ.

ಅಗ್ನಿಹಂಸ ಕವನ ಸಂಕಲನದ ಪ್ರಾರಂಭಕ್ಕೆ ಗುರುದೇವ ಶ್ರೀ ರವೀಂದ್ರನಾಥ ಠಾಕೂರರ ಗದ್ಯಬರಹವನ್ನು ಕುವೆಂಪು ಸೇರಿಸಿದ್ದಾರೆ. ಅದು ಹೀಗಿದೆ:



ಸಕಲ ಸಾಕ್ಷಾತ್ಕಾರದ ಮಾನಸ ಸರೋವರದಿಂದ ಹರಿದು ಬರುವ ಬಹುಪೂಜೆಯ ವಿವಿಧ ವಾಹಿನಿಗಳು ನಿನ್ನ ಧ್ಯಾನ ಸಮುದ್ರದಲ್ಲಿ ಸಂಲಗ್ನವಾಗಿವೆ.
ನಿನ್ನ ಜೀವನದ ಸಮನ್ವಯ ದೇವಮಂದಿರದಲ್ಲಿ ಅನಂತಾನಂದವು ಅಸಂಖ್ಯವಾಗಿ ರೂಪುಗೊಂಡಿದೆ.
ಇದೋ ದೂರದಿಂದಲೂ ಹತ್ತಿರದಿಂದಲೂ ಆ ಗುಡಿಗೆ ಯಾತ್ರೆ ಬರುತ್ತಿರುವ ನಮಸ್ಕಾರಗಳೊಡನೆ ನನ್ನ ನಮಸ್ಕಾರವನ್ನು ನಿವೇದಿಸುತ್ತೇನೆ.

ಗುರುದೇವರ ಈ ಬರಹವನ್ನು ಮನಸ್ಸಿನಲ್ಲಿ ಧ್ಯಾನಿಸಿಕೊಂಡು ‘ಶ್ರೀಗುರು’ ಕವಿತೆಯ ಕಡೆ ನಾವೀಗ ತೆರಳೋಣ. ಒಂದು ಮಾತು: ಈ ಸಂಕಲನದ ಪ್ರಾರಂಭಕ್ಕೆ ಸ್ವಾಮಿ ಸಿದ್ಧೇಶ್ವರಾನಂದರ ನೆನಕೆಯುಂಟು. ವಂಗದೇಶದ ಆಧ್ಯಾತ್ಮಿಕ ಪ್ರಭಾವಳಿಯ ಹಿನ್ನೆಲೆಯೊಂದಿಗೆ ಶ್ರೀಗುರು ಕವಿತೆಗೆ ಮಡಿಯುಟ್ಟು, ನಾವು ಪ್ರವೇಶಿಸೋಣ.

‘ಶ್ರೀಗುರು’ ಕವಿತೆಯು ಒಟ್ಟು ಇಪ್ಪತ್ತನಾಲ್ಕು ಸಾಲುಗಳನ್ನು ಹೊಂದಿದೆ. ನಾಲ್ಕು ಸಾಲುಗಳು ಒಂದೊಂದು ಪದ್ಯದ ಖಂಡಗಳಾಗಿವೆ. ಇದು ಮೇಲ್ನೋಟಕ್ಕೆ ಚೌಪದಿಯಂತೆ ಇದ್ದರೂ ಮುಕ್ತ

ಚೌಪದಿಯ ಮಾತ್ರಾವೃತ್ತವನ್ನು ಅವಲಂಬಿಸಿದೆ. ಕವಿತೆಯ ಮೊದಲ ನಾಲ್ಕು ಸಾಲುಗಳನ್ನು ಮೊದಲು ಗಮನಿಸೋಣ:

**ಭರತಖಂಡದ ನೀಲಗಗನವ ತಿಮಿರ ಮುಸುಗಿರಲು,**
**ಭಾರತೀಯರು ತಮ್ಮ ಧ್ಯೇಯವ ಮರೆತು ಮಲಗಿರಲು,**
**ಪರಮಹಂಸನೆ, ಉದಯಸೂರ್ಯನ ತೆರದಿ ರಂಜಿಸಿದೆ;**
**ಹೃದಯ ನಭದಜ್ಞಾನ ತಿಮಿರವನಿರದೆ ಭಂಜಿಸಿದೆ.**

ಭರತಖಂಡವು ಆಧ್ಯಾತ್ಮಿಕ ವೈಭವದಿಂದಲೂ ಸಾಂಸ್ಕೃತಿಕ ವಿರಾಟ್ ಪ್ರಭೆಯಿಂದಲೂ ಇದ್ದ ದೇಶ. ಕಾಲ ಕಾಲಾಂತರಕ್ಕೆ ಕಸ-ಕಡ್ಡಿಗಳು ಬಂದು ಅಲ್ಲಿಗೆ ಸೇರಿದವು. ಭರತಖಂಡವು ಶುಭ್ರ ನೀಲಾಕಾಶದಂತೆ. ಆದರೆ, ಅದರ ಮೇಲೆ ಕಪ್ಪು ಮೋಡ ಮುಸುಕಿದಂತೆ, ಅಜ್ಞಾನವೆಂಬ ತಿಮಿರವು ಮುಚ್ಚಿಕೊಂಡಿತು. ಜಾತಿ, ವರ್ಣಗಳು ಸಾಮಾಜಿಕ ಸಮತೆಯನ್ನು ಕದಡಿದವು. ಭಾರತೀಯರು ಉನ್ನತ ಧ್ಯೇಯವನ್ನೂ ಆದರ್ಶವನ್ನೂ ಹೊಂದಿದ್ದವರು! ಅವರು ಅದನ್ನು ಮರೆತು ಹೋದರು. ಹೀಗೆ ಆಗುವುದಕ್ಕೆ ನಾನಾ ಕಾರಣಗಳುಂಟು. ಇಂಥ ಸಂದರ್ಭದಲ್ಲಿ ಆಗತಾನೆ ಹುಟ್ಟಿದ ಸೂರ್ಯನಂತೆ ಶ್ರೀರಾಮಕೃಷ್ಣ ಪರಮಹಂಸರು ಭರತಖಂಡದ ನೆಲದಲ್ಲಿ ಕಾಣಿಸಿಕೊಂಡರು. ಅವರು ದಕ್ಷಿಣೇಶ್ವರವನ್ನು ತಮ್ಮ ಆಧ್ಯಾತ್ಮಿಕ ಕ್ಷೇತ್ರವನ್ನಾಗಿ ಆರಿಸಿಕೊಂಡರು. ಜನರ ಹೃದಯದಲ್ಲಿ ಮುಸುಕಿಕೊಂಡಿದ್ದ ಜ್ಞಾನವನ್ನು ತೆರೆದು, ಅದನ್ನು ಇಲ್ಲವಾಗಿಸಿದರು.

'ಶ್ರೀಗುರು' ಕವಿತೆಯು ಪ್ರಾರಂಭವಾಗುವುದು ಆಧುನಿಕ ಭಾರತದ ಸಂಕೀರ್ಣ ನೆಲೆಯಲ್ಲಿಯೇ. ಒಂದು ಕಡೆ ಬ್ರಿಟಿಷರ ಆಧಿಪತ್ಯ ಮತ್ತೊಂದೆಡೆ ಭಾರತೀಯರ ಅವನತ ಸ್ಥಿತಿ. ಇವೆರಡಕ್ಕೂ ಪರಿಹಾರೋಪಾಯ ಬೇಕಾಗಿತ್ತು. ಮುಂದಿನ ಪಂಕ್ತಿಗಳನ್ನು ನಾವು ಗಮನಿಸೋಣ:

**ಸರ್ವಮಾರ್ಗಗಳೊಂದೆ ನಿಲಯಕೆ ಪೋಪುವೆಂಬುದನು**
**ಯೋಗವಿದ್ಯೆಯೊಳರಿತು ಮಾನವಕುಲಕೆ ಬೋಧಿಸಿದೆ;**
**ಕ್ರೈಸ್ತ ಹಿಂದೂ ಮಹಮದೀಯರೆ ಬೌದ್ಧ ಮೊದಲಾದ**
**ಮತಗಳಾತ್ಮವದೊಂದೆ ಎಂಬುದ ತಿಳುಹಿ ಪಾಲಿಸಿದೆ.**

ಭಗವಾನ್ ಶ್ರೀರಾಮಕೃಷ್ಣರು ತಮ್ಮ ಆಧ್ಯಾತ್ಮಿಕ ಔನ್ನತ್ಯದ ಸಾಧನೆಯಿಂದ ಮುಖ್ಯವಾಗಿ ಒಂದೆರಡು ರಹಸ್ಯಗಳನ್ನು ತಿಳಿದುಕೊಂಡರು. ನಾವು ನಡೆಯುವ ಮಾರ್ಗಗಳು ಬೇರೆ ಬೇರೆಯೇನೊ ನಿಜ. ಆದರೆ, ಒಂದೇ ತತ್ತ್ವದ ನಿಲಯಕ್ಕೆ ಅವು ನಮ್ಮನ್ನು ಕರೆದೊಯ್ಯುತ್ತವೆ. ಇದು ಅವರಿಗೆ ತಿಳಿದದ್ದು ಯೋಗ ಸಾಧನೆಯ ವಿದ್ಯೆಯಿಂದ. ಯೋಗ - ಎಂಬುದಕ್ಕೆ ಸೇರುವುದೆಂದು ಪ್ರಸಿದ್ಧಾರ್ಥ ಕೊಡುವ ಒಂದು ಬಗೆ. ಜನರೆಲ್ಲರೂ ಒಂದೇ ಎಂಬ ಸಂದೇಶವನ್ನು ಪರಮಹಂಸರು ಬೋಧಿಸಿದರು. ಕ್ರೈಸ್ತ, ಮಹಮ್ಮದೀಯ, ಹಿಂದೂ, ಪಾರಸಿ, ಬೌದ್ಧ, ಜೈನ, ಚಾರ್ವಾಕ ಇವರೆಲ್ಲರೂ ವಿಘಟನೆಯ ಪರಿವಾರದಲ್ಲಿ ಬದುಕಿದ್ದರು. ತಮ್ಮ ಮತ-ತಮ್ಮ ಸಿದ್ಧಾಂತ ಮೇಲೆಂದು ಹಾರಾಡುತ್ತಿದ್ದರು. ಅದು ಒಟ್ಟು ತತ್ತ್ವಕ್ಕೆ ಬಾಧೆ ತರುತ್ತಿತ್ತು. ಆಗ ಪರಮಹಂಸರು ಎಲ್ಲ ಮತದಲ್ಲಿ ಇರುವುದು ಒಂದೇ ಆತ್ಮ ಎಂಬುದನ್ನು ಮನಗಾಣಿಸಿದರು. ಆಧುನಿಕ ಭಾರತವು ಸ್ವಾತಂತ್ರ್ಯಪೂರ್ವದಲ್ಲಿ ಮತಾಭಿನಿವೇಶಕ್ಕೆ ಒಳಗಾಗಿತ್ತು. ತಮ್ಮ ಮತ ಮೇಲೆಂದು ಕೆಲವರು; ನಿಮ್ಮ ಮತ ಬೀಳೆಂದು ಕೆಲವರು ಕಚ್ಚಾಡುತ್ತಿದ್ದರು. ಭಗವಾನ್ ಶ್ರೀರಾಮಕೃಷ್ಣರು ಆ ತೊಡಕನ್ನು ಬಿಡಿಸಿದರು.

**ಮಾಯತಿಮಿರದಿ ಮಾರ್ಗ ಕಾಣದೆ ಗೋಳಿಡುತಲಿಹರ**
**ಅಭಯದೀಪವ ಹಿಡಿದು ದಾರಿಯ ತೋರಿ ರಕ್ಷಿಸಿದೆ;**
**ಘೋರ ಸಂಸಾರಾಂಬುನಿಧಿಯೊಳು ಮುಳುಗಿ ತೇಲುವರ**
**ಅಮೃತನಾವೆಯ ತಂದು ವೇಲೆಯನಿರದೆ ಸೇರಿಸಿದೆ.**

ಶ್ರೀರಾಮಕೃಷ್ಣರು ಕತ್ತಲೆಯ ದಾರಿಯಲ್ಲಿ ತೊಳಲುತ್ತಿದ್ದವರನ್ನು ಗೋಳಿಡುತ್ತಿರುವವರನ್ನು ಕಂಡರು. ಭೌತಿಕವಾಗಿಯೂ ಅವರು ಕತ್ತಲಲ್ಲಿದ್ದರು; ಆಧ್ಯಾತ್ಮಿಕವಾಗಿಯೂ ಕತ್ತಲಲ್ಲಿ ಇದ್ದರು. ಅವರಿಗೆ ಅಭಯದೀಪವನ್ನು ತೋರಿಸುವವರಾಗಿ ರಾಮಕೃಷ್ಣರು ಕಾಣಿಸಿದರು. ಅಮೃತವೆಂಬ ಹಡಗನ್ನು ತಂದು ಅವರೆಲ್ಲರನ್ನು ದಡಕ್ಕೆ ಸೇರಿಸಿದರು. ಅವರು ಅಮೃತಾತ್ಮರೇ ಆದರು. ಯುಗಕ್ಕೊಬ್ಬರು ಇಂಥ ಮಹಾತ್ಮರು ಅವತರಿಸುತ್ತಾರೆ. ಇಂಥವರು ಕತ್ತಲದಾರಿಗೆ ದೀಪವಾಗುತ್ತಾರೆ. ಭೌತಿಕ ಪ್ರಮಾಣ ಎಷ್ಟು ಮುಖ್ಯವೋ ಆಧ್ಯಾತ್ಮಿಕ ಪ್ರಮಾಣವೂ ಅಷ್ಟೇ ಮುಖ್ಯ.

ಶ್ರೀ ರಾಮಕೃಷ್ಣರು ಲೌಕಿಕ ಚರಿತ್ರರೂ ಹೌದು ಅಲೌಕಿಕ ಸತ್ಯ-ಸ್ವರೂಪರೂ ಹೌದು. ಆಧುನಿಕ ಯುಗಕ್ಕೆ ದಾರಿ ತೋರಿಸಿದ ಪರಮಹಂಸರು. ಹಂಸಪಕ್ಷಿಯು ನೀರನ್ನು ಬಿಟ್ಟು ಹಾಲನ್ನು ಮಾತ್ರ ಸ್ವೀಕರಿಸುತ್ತದೆ. ದೇಹ ಮತ್ತು ಆತ್ಮದ ನೆಲೆಗಳು ಯಾವುವೆಂಬುದನ್ನು ಚೆನ್ನಾಗಿ ತಿಳಿದಿದ್ದರಿಂದ ಅವರು ಪರಮಹಂಸರೇ ಆದರು:

**ಶಿರವ ನಾಕದೊಳಿರಿಸಿ ಚರಣಗಳೆರಡ ಭೂತಳದಿ**
**ಗುರು ಹಿಮಾಚಲದಂತೆ ನಿಂತಿಹೆ, ಶಾಂತಿಯಾಶ್ರಯನೆ,**
**ಹೃದಯ ನಿನ್ನದು ಮೇರೆಯಿಲ್ಲದ ರುಂದ್ರ ವಾರಿನಿಧಿ;**
**ಚಲಿತ ಮತಗಳ ಚಂದ್ರನಾವೆಗಳಲ್ಲಿ ತೇಲುತಿವೆ!**

ಕವಿ ಕುವೆಂಪು ತಮ್ಮ ಸಹಜ ಕವಿತಾವಿಲಾಸದಿಂದಲೂ ಪೌರಾಣಿಕ ಪ್ರತಿಮೆಯ ಸಂಗತಿಯಿಂದಲೂ ನಾಕ ಮತ್ತು ಭೂತಳವನ್ನು ರೂಪಕವಾಗಿಸಿದ್ದಾರೆ. ವೇದದಲ್ಲಿ ದ್ಯಾವಾಪೃಥಿವೀ ಸೂಕ್ತವುಂಟು. ಅದು ದಿವ್ಯತೆ ಮತ್ತು ಭವ್ಯತೆಗಳನ್ನು ಸಂಕೇತಿಸುತ್ತದೆ. ಶ್ರೀರಾಮಕೃಷ್ಣರು ಭೂಸ್ವರ್ಗಗಳನ್ನು ಒಂದು ಮಾಡಿದರು. ಹಿಮಾಚಲದಂತೆ ನೆಲೆ ನಿಂತರು. ಅವರು ಶಾಂತಿಗೆ ಆಶ್ರಯವನ್ನು ಕೊಟ್ಟರು. ಹೃದಯಪೂರ್ವಕವಾಗಿ ಸಮಸ್ತವನ್ನು ಮೇರೆ ಹಾಕಿಕೊಳ್ಳದೆ ತಬ್ಬಿಕೊಂಡರು. ನಾನಾ ಮತಗಳ ಜಳ್ಳುಗಳನ್ನು ಆಕಾಶಕ್ಕೆ ತೂರಿಬಿಟ್ಟರು. ಇಲ್ಲಿ ಕುವೆಂಪು ಹಿಮಾಚಲ ಎಂಬ

ಮಾತನ್ನೂ ಚಲಿತಮತ ಎಂಬ ಮಾತನ್ನೂ ಬಳಸಿದ್ದಾರೆ. ಇವೆರಡೂ ಒಂದೊಂದರ ಸಂಕೇತ. ವರ್ತಮಾನಕ್ಕೆ ಬೇಕಾಗುವ ದರ್ಶನವನ್ನು ಇಟ್ಟುಕೊಂಡರು; ಬೇಡವಾದುದನ್ನು ಬಿಟ್ಟುಕೊಟ್ಟರು. ಶ್ರೀಗುರು ಒಳಿತನ್ನು ಸದಾ ಬಯಸುತ್ತಾರೆ. ಅವರು ಆತ ಬೇಕೆಂದಾಗಲಿ, ಈತ ಬೇಕೆಂದಾಗಲಿ ಭೇದಭಾವ ಮಾಡುವುದಿಲ್ಲ.

**ಕ್ರಿಸ್ತ ಮಹಮದ ರಾಮಕೃಷ್ಣ ಜೊರಾಸ್ತ ಗೌತಮರು**
**ದಿವ್ಯವೇದ ಕುರಾನು ಬೈಬಲು ತಲ್ಮಡಾದಿಗಳು**
**ಗುಡಿಯು ಚರ್ಚು ಮಸೀದಿ ಆಶ್ರಮ ಅಗ್ನಿಪೂಜೆಗಳು**
**ಕಾಶಿ ಮೆಕ್ಕಗಳೆಲ್ಲ ನಿನ್ನೊಳಗೈಕ್ಯವಾಗಿಹವು!**

ನಮ್ಮ ದೇಶವು ಎಲ್ಲ ಬಗೆಯ ಸಂಕರವನ್ನು ಒಳಗು ಮಾಡಿಕೊಂಡಿದೆ. ಇಲ್ಲಿರುವ ವೇದ, ಕುರಾನ್, ಬೈಬಲ್ ಮುಂತಾದ ಧರ್ಮಗ್ರಂಥಗಳು ಜನರ ಆಧ್ಯಾತ್ಮಿಕ ಹಸಿವನ್ನು ನೀಗಿಸಿವೆ. ಇಲ್ಲಿ ಸಹಸ್ರಾರು ಗುಡಿ, ಚರ್ಚು, ಮಸೀದಿ, ಆಶ್ರಮಗಳುಂಟು. ಪವಿತ್ರವಾದ ಕಾಶಿಕ್ಷೇತ್ರವೂ ಇಲ್ಲುಂಟು. ಆದರೆ, ಇವೆಲ್ಲವೂ ಸಾಮರಸ್ಯಗೊಂಡಿರುವುದು ಭಗವಾನ್ ಶ್ರೀರಾಮಕೃಷ್ಣರ ವಚನವೇದದಲ್ಲಿಯೇ. ಶ್ರೀರಾಮಕೃಷ್ಣರು ಎಲ್ಲವನ್ನೂ ತಮ್ಮೊಳಗೆ ಐಕ್ಯ ಮಾಡಿಕೊಂಡಿದ್ದಾರೆ.


ಶ್ರೀರಾಮಕೃಷ್ಣರು ಭೇದದ ಉಪಾಸಕರಾಗಲಿಲ್ಲ. ಅವರು ಅಭೇದದ ಉಪಾಸಕರು. ಆ ತತ್ತ್ವಾನುಷ್ಠಾನದಲ್ಲಿ ಸಮಸ್ತವನ್ನು ದಿವ್ಯಾಲಿಂಗನ ಮಾಡಿಕೊಂಡರು. ದಕ್ಷಿಣೇಶ್ವರವು ಸಮಸ್ತ ಪವಿತ್ರ ಕ್ಷೇತ್ರಗಳ ದಿವ್ಯಕ್ಷೇತ್ರವೇ ಆಯಿತು.

**ದಕ್ಷಿಣೇಶ್ವರ ದೇವನಿಲಯದ ಪರಮಯೋಗೀಂದ್ರ,**
**ಶ್ರೀ ವಿವೇಕಾನಂದ ಪೂಜಿತಾತ್ಮ ಭಾವಿತನೆ,**
**ಲೋಕಜೀವರಿಗಾತ್ಮಶಕ್ತಿಯ ನೀಡಿ ಕಾಪಾಡು,**
**ನೆನೆವರೆಲ್ಲರ ಹೃದಯವಾಗಲಿ ನಿನ್ನ ನೆಲೆವೀಡು!**

ಹತ್ತೊಂಬತ್ತು ಮತ್ತು ಇಪ್ಪತ್ತನೆಯ ಶತಮಾನವು ಆಧ್ಯಾತ್ಮಿಕ ಪ್ರಭಾವಳಿ ಇದ್ದ ಕಾಲ. ಆಗ ಭಾರತವು ಹೊಸಕಾಲದ ಉದಯಕ್ಕೆ ತೆರೆದುಕೊಳ್ಳುತ್ತಿತ್ತು. ಅದೊಂದು ಉದಯಕಾಲವೇ ಸರಿ. ಇಂಥ ಕಾಲದಲ್ಲಿ, ನವಯುಗದ ಉತ್ಸಾಹದಲ್ಲಿ ದಕ್ಷಿಣೇಶ್ವರವು ದೇವನಿಲಯವೇ ಆಯಿತು. ಸಮಸ್ತ ಜನರ ಆಧ್ಯಾತ್ಮಿಕ ಹಸಿವನ್ನು ನೀಗಿಸುವ ಪರಮ ಪವಿತ್ರ ಕ್ಷೇತ್ರವಾಯಿತು. ಸ್ವಾಮಿ ವಿವೇಕಾನಂದರು ಭಗವಾನ್ ಶ್ರೀರಾಮಕೃಷ್ಣರ ಸರ್ವಧರ್ಮಗಳ, ಸರ್ವದರ್ಶನಗಳ, ಸರ್ವಮತಗಳ ಸಾಮರಸ್ಯವನ್ನು ಲೋಕಕ್ಕೆ ಸಾರಿದರು. ಇಂಥ ಪೂರ್ಣಸಂತರು ತಾನೆ ನಮ್ಮಲ್ಲಿ ಆತ್ಮಶಕ್ತಿಯನ್ನು ತುಂಬ ಬಲ್ಲವರು? ಶ್ರೀರಾಮಕೃಷ್ಣ-ವಿವೇಕಾನಂದರು ಭಾರತದ, ವಿಶ್ವದ ಹೊಸಯುಗಕ್ಕೆ ಬೆಳಕಾದರು!

ಶ್ರೀ ಕುವೆಂಪು ಅವರ ಶ್ರೀಗುರು ಕವಿತೆಯು ಲೋಕಗುರುವಿನ ಕವಿತೆಯಾಗಿ ಬೆಳೆಯುತ್ತದೆ. ಗುರು ಎಂದರೆ ಬೆಳಕಿನ ಕಡೆಗೆ ಕರೆದೊಯ್ಯುವುದೆಂದು ಅರ್ಥವಲ್ಲವೆ? ಇಲ್ಲಿ 'ಶ್ರೀಗುರು' ಎಂದಿದೆ. ಅದು ಲೋಕವನ್ನು ಲೋಕಾಂತವನ್ನು ಪ್ರತಿಮಿಸುವ ಸಂಕೇತವಾಗಿದೆ. ಇಲ್ಲಿ ವಿಚಾರ ಗರ್ಭವು ಕವಿತೆಯೊಳಗೆ ಮನೆ ಮಾಡಿಕೊಂಡಿದೆ. ಕುವೆಂಪು ಅವರ ವೈಚಾರಿಕ ದರ್ಶನವು ಶ್ರೀಗುರುವಿನ ಮೂಲಕ ಮಾರ್ಪೊಳೆಯುತ್ತಿದೆ. ✷

**ಯುವಚೇತನ**



## ದೇವರ ಪ್ರತ್ಯಕ್ಷ ದರ್ಶನ

ನಮ್ಮ ಭರತಭೂಮಿಯಲ್ಲಿ ಹಿಂದೆ ಸಾವಿರಾರು ಜನರು ಆತ್ಮಸಾಕ್ಷಾತ್ಕಾರ ಮಾಡಿಕೊಂಡರು. ಈಗಲೂ ಅನೇಕರು ಆತನನ್ನು ಕಂಡಿರುವರು. ಇನ್ನು ಮುಂದೆಯೂ ಸಾವಿರಾರು ಜನರು ಆತ್ಮ ಸಾಕ್ಷಾತ್ಕಾರವನ್ನು ಪಡೆದು ಆತ್ಮನನ್ನು ನೋಡುವರು ಎಂಬ ವಿಷಯ ನಮಗೆ ಆತ್ಮನಲ್ಲಿ ನಂಬಿಕೆಯನ್ನು ಕೊಡುವುದು. ಈಶ್ವರನನ್ನು ಕಂಡು ಆತ್ಮಸಾಕ್ಷಾತ್ಕಾರ ಮಾಡಿಕೊಳ್ಳುವವರೆಗೂ ಮನುಷ್ಯನಿಗೆ ಮುಕ್ತಿಯಿಲ್ಲ. ಆದ್ದರಿಂದ ಎಲ್ಲಕ್ಕಿಂತಲೂ ಹೆಚ್ಚಾಗಿ ಇದನ್ನು ಗ್ರಹಿಸಬೇಕು. ನಾವು ಈ ವಿಷಯವನ್ನು ಹೆಚ್ಚಾಗಿ ಗ್ರಹಿಸಿದಷ್ಟೂ, ನಮ್ಮಲ್ಲಿ ಸಂಕುಚಿತ ಮತೀಯ ಭಾವನೆಯು ಕಡಿಮೆಯಾಗುವುದು. ಏಕೆಂದರೆ ಈಶ್ವರಾನುಭೂತಿ ದೊರೆತ ಮಾನವನಿಗೆ ಮಾತ್ರ ಧರ್ಮಿಷ್ಠನೆಂಬ ಮಾತು ಸಲ್ಲುವುದು, ಅವನ ಬಂಧನಗಳು ಮಾತ್ರ ಹರಿದು ಹೋಗಿರುವುವು. ಸಂಶಯಗಳು ನಾಶವಾಗಿರುವುವು. ಅತ್ಯಂತ ಸಮೀಪನೂ ಹಾಗೂ ಅತ್ಯಂತ ದೂರನೂ ಆದ ದೇವರನ್ನು ಕಂಡವನು ಮಾತ್ರ ಕರ್ಮಫಲಗಳ ವಶನಾಗಿರುವುದಿಲ್ಲ. ಆದರೆ ಕೆಲವು ವೇಳೆ ನಾವು ಧರ್ಮವನ್ನು ಕುರಿತ ಬರಿಯ ಹರಟೆಯನ್ನೇ ನಿಜವಾದ ಧರ್ಮವೆಂದೂ, ಚಮತ್ಕಾರವಾದ ಶಬ್ದಜಾಲವನ್ನು ಮಹಾ ಆತ್ಮಾನುಭೂತಿಯೆಂದೂ ತಪ್ಪಾಗಿ ತಿಳಿದುಕೊಳ್ಳುವೆವು. ಈ ತಪ್ಪು ತಿಳುವಳಿಕೆಯಿಂದ ಸಂಪ್ರದಾಯಗಳೊಳಗೆ ಸ್ಪರ್ಧೆಗಳೂ ಹೋರಾಟಗಳೂ ಹುಟ್ಟುವುವು . ಹೀಗೆ ಮೋಸಹೋಗದೆ, ಪರಮಾರ್ಥ ಸಾಧನೆಯ ಧರ್ಮವೆಂದು ನಾವು ತಿಳಿದ ಕೂಡಲೇ ನಾವು ನಮ್ಮ ಮನಸ್ಸನ್ನು ಶೋಧಿಸಿ ನೋಡುತ್ತೇವೆ. ನಾವು ಧರ್ಮದ ನಿಜಾಂಶವನ್ನು ಎಷ್ಟರಮಟ್ಟಿಗೆ ನಮ್ಮದನ್ನಾಗಿ ಮಾಡಿಕೊಂಡಿರುವೆವು ಎಂಬುದನ್ನು ಗೊತ್ತುಮಾಡಿಕೊಳ್ಳುತ್ತೇವೆ. ಆಗ ನಾವು ಕತ್ತಲಲ್ಲಿ ನಡೆದುಕೊಂಡು ಹೋಗುತ್ತಿರುವೆವು ಎಂಬುದನ್ನೂ , ಇತರರನ್ನು ಅದೇ ಕತ್ತಲಲ್ಲಿ ನಡೆಸಿಕೊಂಡು ಹೋಗುತ್ತಿದೇವೆ ಎಂಬುದನ್ನೂ ತಿಳಿದು, ನಮ್ಮ ಕ್ಷುದ್ರಬುದ್ಧಿಯನ್ನು ಬಿಟ್ಟು ಹೊಡೆದಾಟಗಳನ್ನು ನಿಲ್ಲಿಸುವೆವು.

*— ಸ್ವಾಮಿ ವಿವೇಕಾನಂದರ ಕೃತಿಶ್ರೇಣಿ, ಸಂ.೩, ಪು.೨೩೮*